# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. :74 ಫ್ರಾ.ಸಾ. :57**

| | | |
|---|---|---|
| ಸಾಕ್ಷಿಯ ಹೆಸರು | : | ಶನಾಜಾ ಫಾತೀಮಾ ಎಂ. |
| ಗಂಡನ ಹೆಸರು | : | ಮೊಹಮ್ಮದ್ ಇಬ್ರಾಹಿಂ |
| ವಯಸ್ಸು | : | 51 ವರ್ಷ |
| ಕೆಲಸ | : | ಅಸಿಸ್ಟೆಂಟ್ ಡೈರೆಕ್ಟರ್, ಡಿ.ಎನ್.ಎ., ವಿಭಾಗ ಎಫ್.ಎಸ್.ಎಲ್., ಬೆಂಗಳೂರು |
| ವಾಸ | : | ಬೆಂಗಳೂರು |

**ದಿನಾಂಕಃ 21-01-2026 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2004 ರಿಂದ ಇಲ್ಲಿಯವರೆಗೆ ನಾನು ಬೆಂಗಳೂರಿನ ಎಫ್.ಎಸ್.ಎಲ್.,ನ ಜೈವಿಕ ಮತ್ತು ಡಿ.ಎನ್.ಎ. ವಿಭಾಗದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ಡಿ.ಎನ್.ಎ. ಸಲುವಾಗಿ ನನಗೆ ಇನ್ ಹೌಸ್ ಟ್ರೈನಿಂಗ್, ಬೆಂಗಳೂರು ಮತ್ತು ಎನ್.ಐ.ಸಿ.ಎಫ್., ದೆಹಲಿಯಲ್ಲಿ ತರಬೇತಿ ಆಗಿರುತ್ತದೆ. ನಾನು ಇದುವರೆಗೂ ಸುಮಾರು 1000 ಕ್ಕಿಂತಲೂ ಅಪರಾಧಿಕ ಪ್ರಕರಣಗಳಲ್ಲಿ ಪರೀಕ್ಷೆಗಳನ್ನು ಮಾಡಿ, ವರದಿಗಳನ್ನು ನೀಡಿರುತ್ತೇನೆ ಹಾಗೂ ಇಲ್ಲಿಯ ವರೆಗೆ ಸುಮಾರು 350 ಕ್ಕಿಂತಲೂ ಹೆಚ್ಚು ಪ್ರಕರಣಗಳಲ್ಲಿ ನಾನು ಸಾಕ್ಷಿ ನೀಡಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ.17-11-2018 ರಂದು ಕಾರವಾರದ ಡಿವೈ.ಎಸ್.ಪಿ. ಕಚೇರಿಯಿಂದ ಮೂರು ಸೀಲಾದ ವಸ್ತುಗಳನ್ನು ಡಿ.ಎನ್.ಎ. ಪರೀಕ್ಷೆಗಾಗಿ ಪೊಲೀಸ್ ಸಿಬ್ಬಂದಿಯಾದ ಚಾಸಾ-49/ ಸಿಪಿಸಿ-1695 ರವರ ಮೂಲಕ ಕಳುಹಿಸಿಕೊಟ್ಟಿರುತ್ತಾರೆ. ಸದರಿ ವಸ್ತುಗಳನ್ನು ನಮ್ಮ ಪ್ರಯೋಗಾಲಯದ ಸ್ವೀಕೃತಿ ವಿಭಾಗದವರು ಪಡೆದುಕೊಂಡು, ಅದಕ್ಕೆ ಡಿ.ಎನ್.ಎ.-553/2018 ಎಂದು ನಂಬರು ನೀಡಿರುತ್ತಾರೆ. ಆನಂತರ ಅದೇ ದಿನ ಅವರು ನನಗೆ ಸದರಿ ವಸ್ತುಗಳನ್ನು ನೀಡಿರುತ್ತಾರೆ. ಸದರಿ ವಸ್ತುಗಳನ್ನು ನಾನು ಪಡೆದುಕೊಂಡ ನಂತರ, ಅವುಗಳನ್ನು ಪರಿಶೀಲಿಸಿ ನೋಡಿದಾಗ ಸದರಿ ವಸ್ತುಗಳು

ಸುಸ್ಥಿತಿಯಲ್ಲಿ ಇದ್ದವು ಹಾಗೂ ಅವುಗಳಿಗೆ ಹಾಕಿದ್ದ ಮೊಹರು ಸಹ ಮಾದರಿ ಮೊಹರಿಗೆ ತಾಳೆಯಾಗುತ್ತಿತ್ತು. ಆನಂತರ ನಾನು ಸದರಿ ವಸ್ತುಗಳನ್ನು ನಮ್ಮ ಪ್ರಯೋಗಾಲಯದಲ್ಲಿ ಪರೀಕ್ಷೆಗಾಗಿ ತೆರೆದು ನೋಡಿದಾಗ, ವಸ್ತು ಸಂಖ್ಯೆ1 ರಲ್ಲಿ Molar tooth and pre molar tooth ಇದ್ದು, ಅದಕ್ಕೆ H–3764 ಎಂದು ಕೋಡ್ ನೀಡಲಾಯಿತು, ವಸ್ತು ಸಂಖ್ಯೆ 2 ರಲ್ಲಿ sternum bones with ribs ಇದ್ದು, ಅದಕ್ಕೆ H–3765 ಎಂದು ಕೋಡ್ ನೀಡಲಾಯಿತು, ವಸ್ತು ಸಂಖೆ 3 ರಲ್ಲಿ ಸರೋಜಿನಿ ನಾಯರ್ w/o ಗಂಗಾಧರ ನಾಯರ್ ರವರಿಂದ ಸಂಗ್ರಹಿಸಿದ ರಕ್ತದ ಮಾದರಿ EDTA ನಲ್ಲಿ ಇದ್ದು, ಅದಕ್ಕೆ H–3766 ಎಂದು ಕೋಡ್ ನೀಡಲಾಯಿತು. ಆನಂತರ ನಾನು ಈ ಎಲ್ಲಾ ಮೂರು ವಸ್ತುಗಳನ್ನು ಡಿ.ಎನ್.ಎ. ಪರೀಕ್ಷೆಗೊಳಪಡಿಸಿ, ಡಿ.ಎನ್.ಎ. ವರದಿಯನ್ನು ನೀಡಿರುತ್ತೇನೆ, ಸದರಿ ಡಿ.ಎನ್.ಎ. ವರದಿಯೊಂದಿಗೆ Annexure–I, identification form, sample seal, forwarding note ಗಳನ್ನೂ ಸಹ ಕಳುಹಿಸಿರುತ್ತೇನೆ. ಸಾಕ್ಷಿಯು ತಾನು ನೀಡಿದ ಡಿ.ಎನ್.ಎ. ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–142 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–142(ಎ) ಯಿಂದ (ಸಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು Annexure–I ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–143 ಎಂದು, ಸಾಕ್ಷಿಯ ಸಹಿಯನ್ನು ನಿಪಿ–143(ಎ) ಎಂದು ಗುರುತಿಸಲಾಯಿತು. Identification form ನ್ನು ಈಗಾಗಲೇ ನಿಪಿ–9 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–9(ಡಿ) ಎಂದು ಗುರುತಿಸಲಾಯಿತು. Sample seal ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–144 ಎಂದು, ಸಾಕ್ಷಿಯ ಸಹಿಯನ್ನು ನಿಪಿ–144(ಎ) ಎಂದು ಗುರುತಿಸಲಾಯಿತು. Forwarding note ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–145 ಎಂದು, ಸಾಕ್ಷಿಯ ಸಹಿಯನ್ನು ನಿಪಿ–145(ಎ) ಎಂದು ಗುರುತಿಸಲಾಯಿತು.

3. ನಾನು ನೀಡಿರುವ ವರದಿಯಲ್ಲಿ ಪರೀಕ್ಷೆ ನಡೆಸುವಾಗ ಅನುಸರಿಸಿದ ಪ್ರಕ್ರಿಯೆಯನ್ನು ನಮೂದಿಸಿರುತ್ತೇನೆ. ನನ್ನ ವರದಿಯ ಪ್ರಕಾರ, Molar tooth and pre molar tooth ಮತ್ತು sternum bones with ribs ಮಾನವ ಜಾತಿಗೆ ಸೇರಿರುತ್ತದೆ ಮತ್ತು ಒಬ್ಬ ಗಂಡಸಿಗೆ ಸೇರಿದಾಗಿರುತ್ತದೆ. ಡಿ.ಎನ್.ಎ. ಪರೀಕ್ಷೆಯ ಫಲಿತಾಂಶವು ಸರೋಜಿನಿ ನಾಯರ್ w/o ಗಂಗಾಧರ ನಾಯರ್ ರವರ ರಕ್ತದ ಮಾದರಿಗೆ ಹೊಂದಾಣಿಕೆಯಾಗುತ್ತಿತ್ತು, ಆದ್ದರಿಂದ

ಮೃತ ವ್ಯಕ್ತಿಯು ಸರೋಜಿನಿ ನಾಯರ್ w/o ಗಂಗಾಧರ ನಾಯರ್ ರವರ ಜೈವಿಕ ಮಗನಾಗಿರುತ್ತಾನೆ ಎಂದು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ. ವಸ್ತು ಸಂಖ್ಯೆ: 1 ಮತ್ತು 3 ನ್ನು ಪರೀಕ್ಷೆಗಾಗಿ ಸಂಪೂರ್ಣವಾಗಿ ಬಳಸಿರುತ್ತೇವೆ. ವಸ್ತು ಸಂಖ್ಯೆ:2 ನ್ನು ಪರೀಕ್ಷೆಯ ನಂತರ, ವರದಿ ಪಡೆಯಲು ಬಂದ ಪೊಲೀಸರೊಂದಿಗೆ ಕಳುಹಿಸಿರುತ್ತೇನೆ. ವಸ್ತು ಸಂಖ್ಯೆ:2 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–21 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು: 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ:–**

ಈ ಪ್ರಕರಣದ ಯಾವುದೇ ವಸ್ತುಗಳನ್ನು ಡಿ.ಎನ್.ಎ. ಪರೀಕ್ಷೆಗಾಗಿ ಕಳುಹಿಸಿಲ್ಲ ಹಾಗೂ ನಾನೂ ಸಹ ಯಾವುದೇ ಪರೀಕ್ಷೆಗಳನ್ನು ನಡಸಿ, ವರದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಪರೀಕ್ಷೆಯನ್ನು ನಡೆಸದೇ ನಿಪಿ–142 ಡಿ.ಎನ್.ಎ. ವರದಿಯನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಠಿಸಿ, ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದ:–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲು: 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದ:–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲು: 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ:–**

ಈ ದಿನ 2 ಮತ್ತು 3 ನೇ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ, 1 ನೇ ಆರೋಪಿ ಪರ ವಕೀಲರು ಸದರಿ ವಕೀಲರು ವೈದ್ಯಕೀಯ ಚಿಕಿತ್ಸೆಯಲ್ಲಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ 2 ಮತ್ತು 3 ನೇ ಆರೋಪಿತರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಪರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ